ಪವರ್ ಕಟ್ ಮಾಡಬೇಕಾಗುತ್ತದೆ. ಆದುದರಿಂದ ಅಲ್ಲಿನ ಪ್ರತಿನಿಧಿಗಳು ಯಾವ ಟೈಮ್‌ನಲ್ಲಿ ಕಟ್ ಮಾಡಿದರೆ ಅನುಕೂಲ ಎಂದು ಹೇಳುತ್ತೀರೋ ಆದರಂತೆ ನಾವು ವ್ಯವಸ್ಥೆ ಮಾಡುವುದಕ್ಕೆ ಸಿದ್ಧವಾಗಿದ್ದೇವೆ.

ಶ್ರೀ ಸಿ. ಭೈರೇಗೌಡ.—ರೈತ ಪ್ರತಿನಿಧಿಗಳ ಜೊತೆ ಮಾತನಾಡುವಾಗ ಸರ್ಕಾರದವರು ಒಪ್ಪಿದ್ದಾರೆ. ಮಾನ್ಯ ಬೊಮ್ಮಾಯಿಯವರೂ ಒಪ್ಪಿದ್ದಾರೆ. ಆದುದರಿಂದ ಈಗಾಗಲೇ ಹೇಳಿರತಕ್ಕಂಥಾದನ್ನು ಕಾರ್ಯರೂಪಕ್ಕೆ ತರಬೇಕೆಂದು ವಿನಂತಿಸುತ್ತೇನೆ.

ಉಪಾಧ್ಯಕ್ಷರು.—ತಾವು ಬೇರೆ ರೀತಿಯಲ್ಲಿ ಸೂಚನೆ ಕೊಡಿ. ಅದಕ್ಕೆ ಉತ್ತರ ಹೇಳಂತ್ತಾರೆ.

ನಿಯಮ ೩೩ಳಿರ ಮೇರೆಗೆ

ಉಪಾಧ್ಯಕ್ಷರು.—ಈಗ ೩೩ಳಿರ ನಿಯಮದ ಮೇರೆಗೆ ಬಂದಿರತಕ್ಕಂಥ ನೋಟೀಸುಗಳನ್ನು ಓದುತ್ತೇನೆ. ಮೊದಲಿಗೆ ಶ್ರೀ ಮಾಲೀಕಯ್ಯ ಗುತ್ತೇದಾರ್–ಅಬ್ಸೆಂಟ್, ಶ್ರೀ ಹೆಚ್.ಬಿ.ದ್ಯಾವೀರಪ್ಪ–ಅಬ್ಸೆಂಟ್, ನೆಕ್ಸ್‌ಟ್ ಶ್ರೀ ಬಿ.ಎಸ್. ಯಡಿಯೂರಪ್ಪ ;

(1) ಶಿಕಾರಿಪುರ ತಾಲ್ಲೂಕಿನಲ್ಲಿ ಭೀಕರ ಬರಗಾಲವಿದ್ದರೂ ಅಧಿಕಾರಿಗಳು ನೀರಾವರಿ ತೆರಿಗೆಯನ್ನು ವಸೂಲು ಮಾಡುತ್ತಿರುವುದು

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ)—ಮಾನ್ಯ ಅಧ್ಯಕ್ಷರೇ ೧೯೮೭-೮೮ನೇ ಸಾಲಿನಲ್ಲಿ ಶಿಕಾರಿಪುರ ತಾಲ್ಲೂಕಿನ ರೈತರು ಭೀಕರ ಬರಗಾಲಕ್ಕೆ ತುತ್ತಾಗಿ ಇದರ ಪರಿಣಾಮ ೧೫೦ಕ್ಕೂ ಹೆಚ್ಚು ಹಳ್ಳಿಗಳಲ್ಲಿ ಶೇಕಡ ೨೫ಕ್ಕೂ ಕಡಿಮೆ ಬೆಳೆ ಬಂದಿರುವ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಸರ್ಕಾರಕ್ಕೆ ವರದಿ ಕಳಿಸಿದ್ದರು. ಸರ್ಕಾರ ೨ ತಿಂಗಳ ಹಿಂದೆ ಕಂದಾಯ ವಸೂಲಿ ಬಗ್ಗೆ ಒಂದು ಆಜ್ಞೆ ಹೊರಡಿಸಿರುವ ಪರಿಣಾಮ ಕಂದಾಯ ಮತ್ತು ನೀರಾವರಿ ತೆರಿಗೆಯನ್ನು ಕಟ್ಟುನಿಟ್ಟಾಗಿ ವಸೂಲು ಮಾಡುತ್ತಾ. ರೈತರಿಗೆ ಅಧಿಕಾರಿಗಳು ಕಿರುಕುಳ ಕೊಡುತ್ತಿದ್ದಾರೆ. ಒಂದು ಹೊತ್ತಿನ ಗಂಜಿಗೂ ಯೋಚಿಸುತ್ತಿರುವ ಬರಗಾಲಕ್ಕೆ ತುತ್ತಾದ ರೈತರಿಂದ ಕಂದಾಯ ಹಾಗೂ ನೀರಾವರಿ ತೆರಿಗೆ ವಸೂಲಿ ಮಾಡದಂತೆ ಅಧಿಕಾರಿಗಳಿಗೆ ಆದೇಶ ನೀಡುವ ಬಗ್ಗೆ ಸರ್ಕಾರದ ಗಮನ ಸೆಳೆಯಬಯಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸಂಬಂಧಪಟ್ಟ ಸಚಿವರಿಂದ ಉತ್ತರ ತರಿಸಿ, ಸನ್ಮಾನ್ಯ ಸದಸ್ಯರಿಗೆ ಒದಗಿಸಿಕೊಡುತ್ತೇನೆ.

(2) ವಿದ್ಯುಚ್ಛಕ್ತಿ ಮಂಡಳಿಯವರಿಂದ ಬಳಕೆದಾರರಿಂದ ತಾರತಮ್ಯವಿರುವ ದರವನ್ನು ವಿಧಿಸಿ ವಸೂಲು ಮಾಡುತ್ತಿರುವುದು

ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು) — ಸನ್ಮಾನ್ಯ ಅಧ್ಯಕ್ಷರೇ ಕರ್ನಾಟಕ ರಾಜ್ಯಾದ್ಯಂತ ಈ ತಿಂಗಳಿಂದಲೇ ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯವರು ಸುಮಾರು ೫೦ ಲಕ್ಷಕ್ಕೂ ಮೇಲ್ಪಟ್ಟು ಬಡ ಸಂಸಾರಗಳ ಬಳಕೆದಾರರಿಂದ ಲೈಟ್ ಕನೆಕ್ಷನ್‌ಗೆ ಒಂದು ಪೊತ್ತ, ಎ.ಇ.ಹೆಚ್. ಕನೆಕ್ಷನ್‌ಗೆ ಒಂದು ಪೊತ್ತ. ಪ್ರತಿ ಆಕ್ಷರಕ್ಕೂ ಮತ್ತೊಂದು ಪೊತ್ತವೆಂದು ಎಡಾಪಟ್ಟು ಕಟ್ಟುವರಿ ಡಿಪಾಸಿಟ್ ಪಡೆಯಲು ಬಿಲ್‌ಗಳಲ್ಲಿ ಪೊತ್ತವನ್ನು ಅಳವಡಿಸಿ, ಬಲಾತ್ಕಾರ ವಸೂಲಿಗೆ ಹೊರಟಿರುವುದರಿಂದ, ಜನರಲ್ಲಿ ಹಾಹಾಕಾರವೆದ್ದು ಜನತೆ ಇದನ್ನು ಪ್ರತಿಭಟಿಸಲು (ಡಿಪಾಸಿಟ್–೨) ೨ನೇ ಮತ್ತು ೩ನೇ ಡಿಪಾಸಿಟ್‌ನ್ನು ವಸೂಲು ಮಾಡುವ ಆಜ್ಞೆಯನ್ನು ವಾಪಸ್ಸು ಪಡೆಯುವಂತೆ ಒತ್ತಾಯಿಸಲು ಪ್ರತಿಭಟನೆ ಹಾದಿಗೆ ಇಳಿದಿದ್ದಾರೆ ; ಈ ಅನ್ಯಾಯದ ಆಜ್ಞೆಯನ್ನು ವಿದ್ಯುಚ್ಛಕ್ತಿ ಮಂಡಳಿಗೆ ತಿಳಿಸಿ, ಬಲಾತ್ಕಾರ ವಸೂಲಾತಿಯನ್ನು ನಿಲ್ಲಿಸಿ, ಜನತೆಯ ಬೇಬಕ್ಕೆ ಬರುವುದು ಅವಶ್ಯಕ. ಈ ಬಗ್ಗೆ ಮಾನ್ಯ ವಿದ್ಯುಚ್ಛಕ್ತಿ ಮಂತ್ರಿಯವರು ಹೇಳಿಕೆಯನ್ನು ಸದನದಲ್ಲಿ ಕೊಡಬೇಕೆಂದು ಕೋರುತ್ತೇನೆ.

ಶ್ರೀ ಲಕ್ಷ್ಮಿನರಸಿಂಹಯ್ಯ.—ಈ ವಿಷಯದಲ್ಲಿ ನಿಮಗೆ ಉತ್ತರ ಒದಗಿಸಿಕೊಡುತ್ತೇನೆ. ಇದರಲ್ಲಿ ಒಂದು ಏನೆಂದರೆ ೨ ಎಂ.ಎಂ.ಡಿ. ಎಂದು ಕಲೆಕ್ಟ್ ಮಾಡುತ್ತಿದ್ದರು. ಈಗ ೩ ಎಂ.ಎಂ.ಡಿ. ಎಂದು